
ಸಾಹಿತ್ಯಕ್ಕೆ ಸಮಾಜದ ವಿವಿಧ ಉತ್ತರಾಧಿಕಾರಿಗಳೂ ಇರುತ್ತಾರೆ ಎಂಬುದನ್ನು ಈ ಧೋರಣೆ ಒಪ್ಪುವುದಿಲ್ಲ.

ಕೆಲವು ಹೇಳಿಕೆಗಳಲ್ಲಿ ಬೀಸುತನದ ಗುಣವಿದ್ದರೂ, ಅವು ಸ್ಥಾಪಿತ ಗ್ರಹಿಕೆಗಳನ್ನು ಕಲಕಿ ಹೊಸಚಿಂತನೆಗಳನ್ನು ಎಬ್ಬಿಸುವ ಚಾರಿತ್ರಿಕ ಶಕ್ತಿ ಪಡೆದಿರಬಲ್ಲವು. ಬೂಸಾ ಹೇಳಿಕೆಗೆ ಸಮಾಜವನ್ನು ಮರುಚಿಂತನೆಗೆ ಹಚ್ಚುವ ಇಂತಹ ಚಾರಿತ್ರಿಕ ಶಕ್ತಿಯಿತ್ತು. ಇದರ ಮಹತ್ವವನ್ನು ಮೊದಲಿಗೆ ಮನಗಂಡವರು ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್; ಬಳಿಕ ಕುವೆಂಪು. ಸಾಹಿತ್ಯ ಪಂಥದ ವಿಷಯದಲ್ಲಿ ಕುವೆಂಪು–ಅನಂತಮೂರ್ತಿ ಬೇರೆಧಾರೆಗೆ ಸೇರಿದವರಾಗಿದ್ದರೂ ಈ ಪ್ರಕರಣದಲ್ಲಿ ಸಮಾನ ಮನಸ್ಕತೆ ಪ್ರಕಟಿಸಿದರು. ಕುವೆಂಪು ಪ್ರತಿಕ್ರಿಯೆಯಲ್ಲಿ ಸಾಹಿತ್ಯಿಕ ಆಯಾಮ ಮುಖ್ಯವಾಗಿದ್ದರೆ, ಅನಂತಮೂರ್ತಿಯವರಲ್ಲಿ ಸಾಮಾಜಿಕ–ರಾಜಕೀಯ ಸ್ಪಂದನೆ ಮುಖ್ಯವಾಗಿತ್ತು. ಬಿಬಿಯವರನ್ನು ಬೆಂಬಲಿಸಿ ಅನಂತಮೂರ್ತಿಯವರು 'ವಾಚಕರವಾಣಿ'ಗೆ ಬರೆದ ಪತ್ರದ ಪಾಠವಿದು:

'ಸ್ವಾಮಿ,

ಕನ್ನಡ ಸಾಹಿತ್ಯದ ಹಲವು ಕೃತಿಗಳ ಬಗ್ಗೆ ಸಾಹಿತ್ಯ ವಿಮರ್ಶಕನಾಗಿ ನಾನು ಶ್ರೀ ಬಸವಲಿಂಗಪ್ಪನವರು ಮಾಡಿದರೆನ್ನುವ ಟೀಕೆಯನ್ನು ಮಾಡಬಹುದಿತ್ತು; ಮಾಡಿದ್ದೇನೆ ಕೂಡ. ಆದರೆ, ಬಸವಲಿಂಗಪ್ಪನವರ ಬಗ್ಗೆ ಯಾಕೆ ಈ ಆಕ್ರೋಶ? ಪಂಚಮರಿಗೆ ಸಂಸ್ಕೃತಿಯ ಬಗ್ಗೆ ಮಾತನ್ನಾಡುವ ಅಧಿಕಾರವಿಲ್ಲವೆನ್ನುವ ಭಾವನೆ ನಮ್ಮಲ್ಲಿನ್ನೂ ಅಡಗಿದೆಯೇ? ಮುಸ್ಲಿಮರು ನಮ್ಮ ದೇಶದ ಪ್ರಜೆಗಳಾದರೂ ಸಹ ಭಾರತೀಯ ಸಂಸ್ಕೃತಿಯನ್ನು ನಿರ್ಭಯವಾಗಿ ಟೀಕಿಸುವುದಿಲ್ಲ; ಇದಕ್ಕೆ ಪ್ರಾಯಶಃ ಕಾರಣ ತಾವು ಹೊರಗಿನವರು ಎಂಬ ಭಾವನೆ ಅವರಿಗಿನ್ನೂ ಇದೆ ಎಂಬುದು. ಈ ಭಾವನೆಗೆ ನಾವೆಷ್ಟು ಕಾರಣ, ಅವರೆಷ್ಟು ಕಾರಣ ಎಂಬುದು ಈಗ ಅಪ್ರಸ್ತುತ. ಮುಖ್ಯವಾದ ವಿಷಯ: ನಮ್ಮ ಒಳಗಿನವನು ತಾನು ಬದುಕುತ್ತಿರುವ ಪರಿಸರಕ್ಕೆ ಪ್ರತಿಕ್ರಿಯಿಸುತ್ತಾನೆ; ಟೀಕೆ ಕೂಡ ಇಂಥ ಪ್ರತಿಕ್ರಿಯೆ. ಪಂಚಮರು ನಮ್ಮ ಒಳಗಿನವರು; ಹಾಗೇ ಅವರು ವರ್ತಿಸುತ್ತಿದ್ದಾರೆ. ಅವರ ಈ ಬಂಡಾಯ ಸೃಜನಶೀಲವಾಗಲು ಅವಶ್ಯ. ಪಂಚಮರಿಗೆ ಈ ದೇಶ ಬಿಟ್ಟರೆ ಬೇರೆ ದೇಶವಿಲ್ಲ. ತಮಗೊಂದು ಪ್ರತ್ಯೇಕ ದೇಶ ಬೇಕೆಂದು ಕೂಡ ಅವರು ಕೇಳುತ್ತಿಲ್ಲ. ಸವರ್ಣೀಯರ ನಡುವೆ ನಿಂತು ಸಮಾನತೆಗಾಗಿ ಹೋರಾಡುತ್ತಿದ್ದಾರೆ. ಅವರ ಸಿಟ್ಟು, ಅವರ ನೋವು, ಅವರ ಟೀಕೆ ಇನ್ನೂ ಬಂಧುಗಳ ನಡುವಿನ ಜಗಳದಂತೆಯೇ ಇದೆ. ಆದರೆ, ಸವರ್ಣೀಯರ ಸಣ್ಣತನ ಶೂದ್ರರಿಗೆ ವೇದಾಧಿಕಾರವಿಲ್ಲವೆನ್ನುವ ಗೊಡ್ಡುತನವನ್ನು ನೆನಪಿಗೆ ತರುವಂತಿದೆ. ಪ್ರಸ್ತುತ ವ್ಯವಸ್ಥೆ ಅಧಿಕಾರಕ್ಕೆ ತಂದ ಮಂತ್ರಿಮಂಡಳದಲ್ಲಿದ್ದು ಬಸವಲಿಂಗಪ್ಪನವರು



ಯು.ಆರ್. ಅನಂತಮೂರ್ತಿ